ರಾಜ್ಯದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ

೫೫೬. ಪ್ರೊ. ಎಂ. ಡಿ. ನಂಜುಂಡಸ್ವಾಮಿ(ಧಾರವಾಡ ಗ್ರಾಮಾಂತರ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನಾ ಹಾಗೂ ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನಸೇವಾ, ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಜಪಾನಿನ ಒ. ಇ. ಸಿ. ಎಫ್ ನೆರವು ಸಿಕ್ಕಿದೆಯೇ ?

ಆ) ಈ ನೆರವಿನಲ್ಲಿ ಮನರಂಜನೆಗೆ ಎಂದು ಹೇಳಲಾಗಿರುವ ಹಣವನ್ನು ಗ್ರಾಮಾಂತರ ಜಿಲ್ಲೆಗಳ ಮನರಂಜನೆಗಾಗಿ ಬಳಸಲು ಸರ್ಕಾರವು ಉದ್ದೇಶಿಸಿದೆ ಎನ್ನುವುದು ನಿಜವೆ ?

ಶ್ರೀ ಎಂ. ವೀರಪ್ಪ ಮೊಯಿಲಿ(ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನಸೇವಾ ಇಲಾಖಾ ಮಂತ್ರಿಗಳು).—

ಅ) ಇದುವರೆಗೂ ಸಿಕ್ಕಿಲ್ಲ.

ಆ) ಇಲ್ಲ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಪತ್ರಿಕಾ ಹೇಳಿಕೆ ಪ್ರಕಾರ ಈ ಯೋಜನೆಗೆ ಸುಮಾರು ೧೬೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿತ್ತು. ನಾನು ಬಡ್ಜೆಟ್ ಬಗ್ಗೆ ಮಾತನಾಡುವಾಗ, ವಿದೇಶಿ ಸಾಲ, ವಿದೇಶಿ ನೆರವು ಯಾವ ರೀತಿ ನಮ್ಮ ಆರ್ಥಿಕ ಕಾರ್ಯಕ್ರಮಗಳ ದಿಕ್ಕನ್ನು ಕೆಡಿಸುತ್ತವೆಂದು ಹೇಳಿ ಅದರ ಬಗ್ಗೆ ಮಾತನಾಡುವುದಕ್ಕಿಂತಲೂ ಮುಂಚೆ ನಮ್ಮ ಆರ್ಥ ಸಚಿವರು ತಮ್ಮ ಭಾಷಣದಲ್ಲಿ ವಿದೇಶೀ ಸಾಲ ತೆಗೆದುಕೊಳ್ಳುವಾಗ ಯಾವ ಯಾವ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾರೆಂದು ಕೇಳಿದೆ. ವಿದೇಶಿ ಸಾಲದ ಆಧಾರದ ಮೇಲೆ ಹಾಕಿದ ಕಾರ್ಯಕ್ರಮಗಳಲ್ಲಿ ವಿದೇಶಿ ಸಾಲಕ್ಕೆ ಬಡ್ಡಿ ಕೊಡುವಷ್ಟು ಸಂಪಾದನೆ ಮಾಡುವ ಉದ್ಯಮವಾದರೆ ಮಾತ್ರ ನಾವು ಸಾಲವನ್ನು ತೆಗೆದು ಕೊಳ್ಳುತ್ತೇವೆಂದರು. ಅಸಲು ಕೊಡುವ ಯೋಚನೆಯೇ ಇಲ್ಲ. ವಿದೇಶಿ ಸಾಲಕ್ಕೆ ಬಡ್ಡಿ ಕಟ್ಟುವುದಕ್ಕೆ ಸಾಧ್ಯವಾಗುವ ಕಾರ್ಯಕ್ರಮಗಳಾದರೂ ನಾವು ಸಾಲ ತೆಗೆದುಕೊಳ್ಳುವುದಕ್ಕೆ ತಯಾರು ಇದ್ದೇವೆ, ಇದಕ್ಕೆ ಸಂಬಂಧಪಟ್ಟಹಾಗೆ ನಾನು ಸರ್ಕಾರಕ್ಕೆ ಆಗ್ರಹ ಮಾಡುತ್ತೇನೆ. ಈ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ೧೬೨ ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಏನು ಹಾಕುತ್ತಿದ್ದೀರೋ ಇದನ್ನು ದಯವಿಟ್ಟು ಕೈಬಿಡಬೇಕು. ಏಕೆಂದರೆ, ಕರ್ನಾಟಕದ ನಮ್ಮನ್ನು ಸಾಲದ ಹೊರಗೆ ಸಿಕ್ಕಿಸಬಾರದು, ಕಾರಣ ಇಷ್ಟೇ. ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ೧೯೮೫-೮೬ನೇ ಸಾಲಿನ ವಾರ್ಷಿಕ ವರದಿ ಈಗ ನಮ್ಮ ಕೈಗೆ ಸಿಕ್ಕಿದೆ.

ಶ್ರೀ ಕೆ. ಬಿ. ಕೋಳಿವಾಡ್.—ಮಾನ್ಯ ಸದಸ್ಯರು ನೇರವಾಗಿ ಪ್ರಶ್ನೆ ಕೇಳಲಿ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಇದು ಬಹಳ ಮುಖ್ಯ ವಿಚಾರವಾಗಿದ್ದು ಇದನ್ನು ಸಂಕ್ಷಿಪ್ತವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಕೋಳಿವಾಡ್ ಅವರದ್ದು ಇದಿನ ಪಟ್ಟಿಯಲ್ಲಿ ಕೊನೆಯ ಪ್ರಶ್ನೆ ಇದೆ. ಅದಕ್ಕೆ ಅವಕಾಶ ಅವರಿಗೂ ಸಿಗಬೇಕಾಗುತ್ತದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ನನ್ನ ಮಾತಿನ ವೇಗವನ್ನು ಸ್ವಲ್ಪ ಜಾಸ್ತಿ ಮಾಡುತ್ತೇನೆ ದಯವಿಟ್ಟು ನಮ್ಮನ್ನು ಈ ಸಾಲಕ್ಕೆ ಏಕೆ ಸಿಕ್ಕಿಸಬೇಡಿ ಎಂದು ಹೇಳುತ್ತಿದ್ದೇನೆಂದರೆ, ಪ್ರವಾಸೋದ್ಯಮ ಇಲಾಖೆಯ ೧೯೮೫-೮೬ರ ವರದಿ ಪ್ರಕಾರ ಅಲ್ಲಿ ೧ ಕೋಟಿ ರೂಪಾಯಿ ನಷ್ಟ ಆಗಿದೆ. ಆ ನಂತರದ ಈ ನಿಗಮದ ಇತ್ತೀಚಿನ ವರದಿ ನಮಗೆ ಬಂದಿಲ್ಲ, ಆ ನಂತರ ಎಷ್ಟು ನಷ್ಟವಾಗಿದೆಯೋ ಗೊತ್ತಿಲ್ಲ. ಇದೆಲ್ಲಾ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಕೈಬಿಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ. ಹಾಗೂ ನಮ್ಮ ಆರ್ಥಿಕ ಕಾರ್ಯಕ್ರಮದಲ್ಲಿ ಆದ್ಯತೆ ಬಗ್ಗೆ ಸ್ವಲ್ಪ ದೋಷ ಕೂಡಾ ಇದೆ, ೧೬೨ ಕೋಟಿ ರೂಪಾಯಿ ಖರ್ಚು ಮಾಡಿ ಅದರಲ್ಲಿ ನನಗೆ ಗೊತ್ತಿರುವಹಾಗೆ ೨೫ ಕೋಟಿ ರೂಪಾಯಿಗಳನ್ನು ಮನರಂಜನೆಗೋಸ್ಕರ ಖರ್ಚು ಮಾಡುವುದು. ಈ ಬಗ್ಗೆ ನಾನು ಪತ್ರಿಕಾ ವರದಿ ಓದಿದ್ದು ನಾನು ಮುಂಡರಿಗಿ ಕ್ಷೇತ್ರದಲ್ಲಿ ಪ್ರವಾಸ ಮಾಡುತ್ತಿದ್ದಂತಹ ಸಮಯದಲ್ಲಿ. ಅಲ್ಲಿನ ಅಂಗನವಾಡಿ ಮಕ್ಕಳನ್ನು, ಆ ಮಕ್ಕಳ ಬಡತನವನ್ನು ನೋಡುತ್ತಿದ್ದಾಗ ಈ ಮಕ್ಕಳಿಗಾಗಿ ನಮ್ಮ ಕರ್ನಾಟಕದಲ್ಲಿ ಒಂದು ಡಿಸ್ನಿ

ಲ್ಯಾಂಡ್ ಆಗುತ್ತದೆಯಾಷ್ಟೆ ಎಂದುಕೊಂಡೆ. ಇಂತಹ ಬಡ ಮಕ್ಕಳು ಹೆಚ್ಚಿರುವ ನಮ್ಮ ಕರ್ನಾಟಕದಲ್ಲಿ ಇಂತಹ ಒಂದು ಕಾರ್ಯಕ್ರಮವನ್ನು ನಿಮಗಾಗಿ ಹಾಕಿಕೊಳ್ಳುತ್ತಿದ್ದಾರೆಂದು ನಾನು ಆ ಮಕ್ಕಳಿಗೆ ಹೇಳಿದೆ. ಆದರೆ ಎಲ್ಲಾ ಬಿಟ್ಟ ಮಗ ಭಂಗಿ ನೆಟ್ಟ ಎನ್ನುವ ಹಾಗೆ ಈ ಕರ್ನಾಟಕದಲ್ಲಿ ಮಾಡುತ್ತಿದ್ದಾರೆ. ದಯವಿಟ್ಟು ಇದನ್ನು ಕೈಬಿಡಬೇಕೆಂದು ನಾನು ಹೇಳುತ್ತಿದ್ದೇನೆ. ದಯವಿಟ್ಟು ಇದನ್ನು ಕೈಬಿಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ — ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಹೇಳುವಂತಹದ್ದು. ಸಾಲವಿಲ್ಲದೆ ಒಂದು ರಾಜ್ಯವನ್ನು ಕಟ್ಟುವುದಾದರೆ ಅದಕ್ಕಿಂತ ಆದರ್ಶ ಕಾರ್ಯಕ್ರಮ ಬೇರೆ ಇಲ್ಲ. ಸಂಪನ್ಮೂಲಗಳು ಇಲ್ಲದೆ ಇದ್ದಾಗ, ಅಭಿವೃದ್ಧಿಯನ್ನು ನಮ್ಮ ರಾಜ್ಯದಲ್ಲಿ ಮಾಡಬೇಕಾದರೆ, ಅಭಿವೃದ್ಧಿ ಮಾಡದಿದ್ದರೆ ಸಂಪನ್ಮೂಲ ಬೆಳೆಯಂವುದಿಲ್ಲ. ಯಾವುದಾದರೂ ರಾಜ್ಯ ಬೆಳವಣಿಗೆಯಾಗಬೇಕಾದರೆ ಯಾವ ಮೂಲದಿಂದಲಾದರೂ ಆರ್ಥಿಕ ಪೌಲ್ಯವರ್ಧನೆ ಮಾಡಿದರೆ ಸಾಲ ತೆಗೆದುಕೊಂಡರೆ, ಆ ಸಾಲದಿಂದ ರಾಜ್ಯ ಅಭಿವೃದ್ಧಿ ಆಗುವುದಾದರೆ, ಆ ಅಭಿವೃದ್ಧಿ ಕಾರ್ಯಕ್ರಮದಿಂದ ಜನರಿಗೆ ಉದ್ಯೋಗ, ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು ಇದ್ದರೆ ನಾವು ಸಾಲ ತೆಗೆದುಕೊಳ್ಳುತ್ತೇವೆ. ಸಾಲದ ಬಲೆಯಲ್ಲಿ ಸಿಕ್ಕಿಸಲಿಕ್ಕೆ ಈ ಯೋಜನೆ ಇಲ್ಲ. ಆ ತರಹದ ಯೋಜನೆಗಳು ನಮ್ಮಲ್ಲಿಲ್ಲ. ೧೬೨ ಕೋಟಿ ರೂಪಾಯಿಗಳಲ್ಲಿ ೧೦೭ಕೋಟಿ ರೂಪಾಯಿಗಳನ್ನು ಸಾರ್ವಜನಿಕವಾಗಿ ರಾಜ್ಯದ ಮಟ್ಟಿಗೆ ಖರ್ಚು ಮಾಡುತ್ತೇವೆ. ಉಳಿದ ಹಣವನ್ನು ಇತರೆ ಕಾರ್ಯಕ್ರಮಗಳಿಗೆ ವೆಚ್ಚ ಮಾಡುತ್ತೇವೆ. ಆದರಲ್ಲಿ ೧೬ ಕೋಟಿ ರೂಪಾಯಿಗಳು ಅನುದಾನ ರೂಪದಲ್ಲಿ ಬರುತ್ತದೆ. ೧೬೨ ಕೋಟಿಗಳಲ್ಲಿ ೧೬ ಕೋಟಿ ರೂಪಾಯಿ ಅನುದಾನ ರೂಪದಲ್ಲಿ ಬರುತ್ತದೆ. ಎಲ್ಲಾ ವಿಚಾರವನ್ನು ಸಾಲ ತೆಗೆದುಕೊಳ್ಳುವಾಗ ವಿಚಾರ ಮಾಡಲಾಗಿದೆ. ಈ ಹಣಕ್ಕೆ ಬಡ್ಡಿ ಕಡಿಮೆ ಇರುವುದರಿಂದ ಅಭಿವೃದ್ಧಿಗೆ ಅನುಕೂಲವಾಗುತ್ತದೆ. ಇದರಿಂದ ಕರ್ನಾಟಕ ರಾಜ್ಯದ ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲ ಮಾಡುವುದರ ಜೊತೆಗೆ ಉದ್ಯೋಗ, ಆದಾಯದ ಏರಿಕೆಗೆ ಪ್ರಯತ್ನ ಮಾಡಿದ್ದೇವೆ. ಕೃಷ್ಣರಾಜ ಸಾಗರ ಜಲಾಶಯದ ಬೃಂದಾವನವನ್ನು ರೀ ಇಲ್ಯುಮೆನೇಷನ್ ಮಾಡಿದ್ದೇವೆ. ಅದಕ್ಕೆ ಒಂದೂವರೆ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಈ ಸದನದಲ್ಲಿ ಮತ್ತು ಹೊರಗೆ ಇಷ್ಟು ಹಣವನ್ನು ಏತಕ್ಕೆ ಖರ್ಚು ಮಾಡುತ್ತೀರಿ ಎಂದು ಹೇಳಿದರು. ಅದು ಶ್ರೀಮಂತರಿಗಾಗಿ ಭರತಕ್ಕೆ ಪಾರ್ಕ್ ಅದಕ್ಕೆ ಇಷ್ಟೊಂದು ಖರ್ಚು ಮಾಡುತ್ತೀರಿ ಎಂದು ಕೇಳುತ್ತಿದ್ದರು. ಸಂಜೆ ಹೋದರೆ ಅಲ್ಲಿ ಏನು ಮಾಡಿದ್ದೇವೆ ಎನ್ನುವುದು ಕಾಣುತ್ತದೆ. ಒಂದೂವರೆ ಕೋಟಿ ರೂಪಾಯಿಗಳನ್ನು ನಾವೇನು ಖರ್ಚು ಮಾಡಿದ್ದೇವೆ ಅದು ಒಂದು ವರ್ಷಕ್ಕೆ ೧ ಕೋಟಿ ೭೫ ಲಕ್ಷ ಹಣ ಬಂದಿದೆ.

ಶ್ರೀ ವಾಟಾಳ್ ನಾಗರಾಜ್.— ನೀವು ದೀಪ ಹಾಕದಿದ್ದರೂ ಜನ ದುಡ್ಡು ಕೊಡುತ್ತಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ.— ಒಂದು ವರ್ಷಕ್ಕೆ ೧ ಕೋಟಿ ೭೫ ಲಕ್ಷ ರೂಪಾಯಿ ಆದಾಯ ಬರುತ್ತಿದೆ. ಆರ್ಥಿಕ ಸಾಮಾಜಿಕ ಮೌಲ್ಯವರ್ಧನೆ ಮಾಡಿ ಇದು ರಾಜ್ಯಕ್ಕೆ ಆಗಬೇಕೆಂದು ನಾವು ಆಲೋಚನೆ ಮಾಡಿದ್ದೇವೆ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಈಗಾಗಲೇ ಪ್ರವಾಸೋದ್ಯಮ ನಿಗಮ ನಷ್ಟದಲ್ಲಿದೆ. ಅದು ಲಾಭ ತಂದು ಕೊಡುವುದನ ಸತ್ಯಕ್ಕೆ ದೂರವಾದ ಮಾತು. ನಾಲ್ಕೈದು ವರ್ಷ ಬರಗಾಲವನ್ನು ಅನುಭವಿಸಿರತಕ್ಕ ನಮ್ಮ ಸರ್ಕಾರಕ್ಕೆ ಡಿಸ್ನಿಲ್ಯಾಂಡ್ ಬೇಕೆನ್ನುವ ವಿಚಾರವನ್ನು ದಯವಿಟ್ಟು ಕೈಬಿಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.— ಮನರಂಜನಾ ಪಾರ್ಕ್ ಡಿಸ್ನಿಲ್ಯಾಂಡ್ ಅಲ್ಲ, ಅದನ್ನು ಸರ್ಕಾರಿ ಜಲಯದಲ್ಲಿ ಮಾಡುವುದಿಲ್ಲ ಖಾಸಗಿ ವಲಯದಲ್ಲಿ ಮಾಡುತ್ತಾರೆ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಹಿಂದಿನ ಸರ್ಕಾರವಿದ್ದಾಗ ರೂಪಿಸಿದ ಕಾರ್ಯಕ್ರಮ ಅದು.

ಶ್ರೀ ಎಂ. ವೀರಪ್ಪ ಮೊಯಿಲಿ.— ಹಿಂದಿನ ಸರ್ಕಾರದವರು ಏನು ಮಾಡಿದ್ದರೋ ನನಗೆ ಗೊತ್ತಿಲ್ಲ. ಮಕ್ಕಳ ಮನರಂಜನಾ ಪಾರ್ಕಿಗೂ ಡಿಸ್ನಿಲ್ಯಾಂಡ್‌ಗೂ ಆದಕ್ಕೂ ಇದಕ್ಕೂ ಸಂಬಂಧವಿಲ್ಲ.